# ಮಿಂಚಿನ ದೈವ

■ ಪ್ರವೀಣ ಕುಲಕರ್ಣಿ




ಇಂಗ್ಲೆಂಡ್‌ನ ಈ ನವತಾರೆಗೆ 'ಮುಂದಿನ ಉಸೇನ್ ಬೋಲ್ಟ್' ಎಂದು ಈಗಲೇ ಹೇಳುವುದು ಆತುರದ ನಿರ್ಧಾರವಾಗಬಹುದು. ಆದರೆ, ಮಿಂಚಿನ ವೇಗದ ಈ ಓಟಗಾರ ಅಥ್ಲೆಟಿಕ್ಸ್ ಜಗತ್ತಿನಲ್ಲಿ ಈಗಾಗಲೇ ಛಾಪು ಮೂಡಿಸಿರುವುದಂತೂ ಸತ್ಯ. ಯೂರೋಪಿನ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ 18 ವರ್ಷದೊಳಗಿನವರ ವಿಭಾಗದಲ್ಲಿ ಡಿವೈನ್ ಇಹೆಮೆ ಓಡಿದ ಪರಿ ಹೇಗಿತ್ತೆಂದರೆ, ಮೈದಾನದಲ್ಲಿ ನೆರೆದವರಿಗೆಲ್ಲ ಬೋಲ್ಟ್ ನೆನಪಾಗಿದ್ದರು. ಟ್ರ್ಯಾಕ್‌ನಲ್ಲೊಂದು ಹೊಸ ತಾರೆಯ ಉದಯವಾಗಿದೆ ಎಂಬುದನ್ನೂ ಅಲ್ಲಿನ ಫಲಿತಾಂಶ ಸಾರಿತ್ತು. ಲೀ ವ್ಯಾಲಿ ಅಥ್ಲೆಟಿಕ್ ಕೂಟದ 18 ವರ್ಷದೊಳಗಿನವರ ವಿಭಾಗದ 100 ಮೀಟರ್ ಓಟದ ಸ್ಪರ್ಧೆಯಲ್ಲಿ ಕೇವಲ 10.30 ಸೆಕೆಂಡ್‌ಗಳಲ್ಲಿ ಗೆಲುವಿನ ಗುರಿ ತುಳಿದ ಡಿವೈನ್, ವಿಶ್ವದಾಖಲೆಯನ್ನೇ ನಿರ್ಮಿಸಿದ್ದಾರೆ. ಹದಿನಾಲ್ಕು ವರ್ಷದ ಈ ಪೋರ ಮುಂದಿನ ದಿನಗಳಲ್ಲಿ ಇನ್ನೂ ಯಾವ ಯಾವ ದಾಖಲೆಗಳನ್ನು ಪುಡಿಗಟ್ಟಲಿದ್ದಾನೋ ಏನೋ ಎಂದು ಕ್ರೀಡಾಜಗತ್ತು ಕುತೂಹಲದಿಂದ ಗಮನಿಸುತ್ತಿದೆ.

'ಮಿಂಚಿನ ದೈವ' (Lightning Divine) ಎಂಬ ಹೆಸರಿನಿಂದಲೂ ಕರೆಯಿಸಿಕೊಳ್ಳುವ ಡಿವೈನ್, ಇಂಗ್ಲೆಂಡ್‌ನ ಅಥ್ಲೀಟ್ ಆಗಿದ್ದರೂ ಅವರ ಮೂಲ ನೈಜೀರಿಯಾ. ಅವರ ತಂದೆ–ತಾಯಿಗಳಾದ ಇನೋಸೆಂಟ್ ಮತ್ತು ಕಿರುಕು ಇಬ್ಬರೂ ನೈಜೀರಿಯಾದಿಂದ ವಲಸೆ ಬಂದವರು. ಇಬ್ಬರೂ ಅಥ್ಲೀಟ್‌ಗಳು. ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಇಬ್ಬರೂ ನೈಜೀರಿಯಾ ತಂಡವನ್ನು ಪ್ರತಿನಿಧಿಸಿದ್ದವರು. ಡಿವೈನ್‌ಗೆ ಅವರ ತಾಯಿ ಕಿರುಕು ಅವರೇ ಮೊದಲ ಗುರು. ಆಕ್ಸ್‌ಫರ್ಡ್ ಶೈರ್‌ನಲ್ಲಿ ಅಥ್ಲೆಟಿಕ್ಸ್ ಅಕಾಡೆಮಿಯನ್ನು ನಡೆಸುವ ಕಿರುಕು, ಮಗ ತೊದಲು ಹೆಜ್ಜೆ ಇಡುವಾಗಲೇ ಕ್ರೀಡಾದೀಕ್ಷೆಯನ್ನು ಕೊಟ್ಟವರು. ಕ್ರೀಡಾ ಸೌಲಭ್ಯ, ತರಬೇತಿ ಎರಡರಲ್ಲೂ ಡಿವೈನ್‌ಗೆ ಸರಿಸಾಟಿ ಇಲ್ಲದಂತಹ ಬೆಂಬಲ ಬಾಲ್ಯದಲ್ಲೇ ಸಿಕ್ಕಿತು. ಭಾಗವಹಿಸಿದ ಪ್ರತಿಯೊಂದು ಕ್ರೀಡಾಕೂಟದಲ್ಲೂ ಯಶಸ್ಸು ಹಿಂಬಾಲಿಸುತ್ತಿದ್ದರೂ ಅದು ಡಿವೈನ್ ತಲೆಗೆ ಏರಿಲ್ಲ. ಎಲ್ಲವನ್ನೂ ಅವರು ವಿನೀತ ಭಾವದಿಂದ ಸ್ವೀಕರಿಸುತ್ತಾರೆ. ಬೋಲ್ಟ್ ಅವರಂತಹ ಘಟಾನುಘಟಿ ಓಟಗಾರರ ಶೈಲಿಯನ್ನು ಬಲು ಎಚ್ಚರಿಕೆಯಿಂದ ಅಧ್ಯಯನ ಮಾಡಿದರೂ ಸ್ವಂತ ಶೈಲಿಯನ್ನು ರೂಢಿಸಿಕೊಂಡವರು.

'ಉಸೇನ್ ಬೋಲ್ಟ್ ಮತ್ತು ಎಲಿಸನ್ ಫೆಲಿಕ್ಸ್ ಅವರ ಓಟಗಳನ್ನು ನಾನು ಮತ್ತೆ ಮತ್ತೆ ನೋಡುತ್ತೇನೆ. ಅವರಿಂದ ಪ್ರಭಾವಿತನಾಗಿದ್ದೇನೆ. ಟ್ರ್ಯಾಕ್‌ನಲ್ಲಿ ದೊಡ್ಡ ಸಾಧನೆ ಮಾಡಬೇಕು ಎಂಬ ಕನಸು ಕಂಡಿದ್ದೇನೆ. ಹಾಗಂತ ಅವರ ಶೈಲಿಯನ್ನು ಅನುಕರಿಸುವ ಗೋಜಿಗೆ ಹೋಗಿಲ್ಲ. ನನ್ನ ಶೈಲಿ ನನಗೆ ಸಹಜವಾಗಿ ಸಿದ್ಧಿಸಿದ್ದು' ಎಂದು ಡಿವೈನ್ ಹೇಳುತ್ತಾರೆ. ಈ ಓಟಗಾರ ಸ್ಪರ್ಧಿಸಿದ ಕೂಟಗಳಲ್ಲಿ ಅವರ ಓಟವನ್ನು ನೋಡಲೆಂದೇ ಸಾವಿರಾರು ಸಂಖ್ಯೆಯಲ್ಲಿ ಜನ ನೆರೆಯುವುದೂ ಇದೆಯಂತೆ. 'ಹೌದು, ನನ್ನ ಮಗನ ಓಟವನ್ನು ನೋಡಲು ದೊಡ್ಡ ಸಂಖ್ಯೆಯಲ್ಲಿ ಅಭಿಮಾನಿಗಳು ನೆರೆಯುತ್ತಾರೆ. ಎಲ್ಲರಿಗೂ ಆತನ ಸಾಮರ್ಥ್ಯ ಎಂಥದೆಂಬುದು ಗೊತ್ತು. ಅವನು ದಾಖಲೆಗಳನ್ನು ನೋಡುತ್ತಾನೆ. ಅವುಗಳನ್ನು ಮುರಿಯುವುದೇ ನನ್ನ ಗುರಿ ಎನ್ನುತ್ತಾ, ಟ್ರ್ಯಾಕ್‌ಗೆ ಇಳಿಯುತ್ತಾನೆ' ಎಂದು ಕಿರುಕು ಹೇಳುತ್ತಾರೆ.

ಡಿವೈನ್, ತಮ್ಮ ವಯೋಮಾನದ ಗುಂಪಿನಲ್ಲಿ ತಾವೇ ನಿರ್ಮಿಸಿದ್ದ ದಾಖಲೆಗಳನ್ನು ಮುರಿದು ಸಂಭ್ರಮಿಸುತ್ತಿದ್ದಾರೆ. ಕಿರಿಯರ ವಿಭಾಗದ 100 ಮೀಟರ್ ಓಟದಲ್ಲಿ ಎರಡು ಬಾರಿ ಅವರು ಹಳೆಯ ದಾಖಲೆಗಳನ್ನು ಮೀರಿ ನಿಂತಿದ್ದರು. ಆದರೆ, ಗಾಳಿಯ ಒತ್ತಡ ಹೆಚ್ಚಿದ್ದ ಕಾರಣ ಆ ದಾಖಲೆಯನ್ನು ಸಂಘಟಕರು ಮಾನ್ಯ ಮಾಡಿರಲಿಲ್ಲ. ಛಲ ಬಿಡದ ಡಿವೈನ್, ಲೀ ವ್ಯಾಲಿ ಅಥ್ಲೆಟಿಕ್ ಕೂಟದಲ್ಲಿ 10.30 ಸೆಕೆಂಡ್‌ಗಳಲ್ಲೇ ಗುರಿ ತಲುಪಿ, ವಿಶ್ವದಾಖಲೆಯೊಂದಿಗೆ ಬೀಗಿದರು. ಇತರ ಎದುರಾಳಿಗಳನ್ನು ಹಲವು ಮೀಟರ್‌ಗಟ್ಟಲೆ ಹಿಂದಿಕ್ಕಿ, ಲೀಡರ್ ಆಗಿ ಹೊರಹೊಮ್ಮುತ್ತಿರುವ ಈ ಓಟಗಾರನ ಮೇಲೆ ಇಂಗ್ಲೆಂಡ್‌ನ ಅಥ್ಲೆಟಿಕ್ ಲೋಕ ಬಹುದೊಡ್ಡ ಭರವಸೆಯನ್ನು ಇಟ್ಟಿದೆ.

'ಡಿವೈನ್ ಓಟದಲ್ಲಿ ವೇಗವೂ ಇದೆ, ತಂತ್ರವೂ ಇದೆ. ಹೀಗಾಗಿ ಭವಿಷ್ಯದಲ್ಲಿ ದೊಡ್ಡ ತಾರೆಯಾಗಿ ಹೊರಹೊಮ್ಮುವಲ್ಲಿ ಯಾವುದೇ ಅನುಮಾನ ಇಲ್ಲ' ಎಂದು ಕಿರುಕು, ತಮ್ಮ ಮಗನನ್ನು ಮುಕ್ತಕಂಠದಿಂದ ಪ್ರಶಂಸಿಸುತ್ತಾರೆ. ಅಥ್ಲೆಟಿಕ್ಸ್ ಜಗತ್ತಂತೂ ಹೊಸ ಉಸೇನ್ ಬೋಲ್ಟ್‌ನ ಉದಯವಾಗಿದೆ ಎಂದೇ ಸಂಭ್ರಮಿಸುತ್ತಿದೆ. ಈ ಮಿಂಚಿನ ದೈವ ಜಾಗತಿಕ ರಂಗದಲ್ಲಿ ಮಿಂಚುವ ದಿನಗಳಿಗಾಗಿ ಕ್ರೀಡಾಲೋಕವೂ ಕಾಯುತ್ತಿದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65